5.	ಶಿವಮೊಗ್ಗ	22,090-00
6.	ಚಿತ್ರದುರ್ಗ	14,800-00
7.	ತುಮಕೂರು	11,400-00
8.	ಬಿಜಾಪುರ	15,000-00
9.	ಗುಲ್ಬರ್ಗಾ	40,000-00
10.	ಬೆಳಗಾಂ	16,000-00
11.	ಧಾರವಾಡ	16,000-00
12.	ರಾಯಚೂರು	26,800-00
13.	ಬೀದರ್	40,000-00
14.	ಬಳ್ಳಾರಿ	15,000-00
15.	ಮಂಡ್ಯ	70,000-00
16.	ಕೋಲಾರ	45,000-00
	ರೂ.	4,27,590-00

ಹುಬ್ಬಳ್ಳಿ ಸೆಂಟ್ರಲ್ ಬಸ್‌ಸ್ಟ್ಯಾಂಡ್‌ನಲ್ಲಿ ಬಾಂಬ್ ಸ್ಫೋಟ

2237 - ಶ್ರೀ ಅಶೋಕ ಕಾಟ್ವೆ (ಹುಬ್ಬಳ್ಳಿ ನಗರ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹುಬ್ಬಳ್ಳಿ ಸೆಂಟ್ರಲ್ ಬಸ್‌ಸ್ಟ್ಯಾಂಡ್‌ನಲ್ಲಿ ಕಳೆದ ಕೆಲವು ದಿನಗಳ ಹಿಂದೆ ಹುಬ್ಬಳ್ಳಿ - ಧಾರವಾಡ ನಡುವೆ ಸಂಚರಿಸುವ ಬಸ್ ಹುಬ್ಬಳ್ಳಿ ಬಸ್ ಸ್ಟ್ಯಾಂಡ್‌ಗೆ ಬಂದಾಗ ಬಸ್ಸಿನಲ್ಲಿ ಬಾಂಬ್ ಸ್ಫೋಟವಾಗಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಬಾಂಬ್ ಸ್ಫೋಟ ಮಾಡಿದ ಆಪರಾಧಿಗಳನ್ನು ಬಂಧಿಸಲಾಗಿದೆಯೆ, ಹಾಗಿದ್ದಲ್ಲಿ ಅವರ ತನಿಖೆ ಯಾವ ಹಂತಕ್ಕೆ ಬಂದಿದೆ ಮತ್ತು ಇದರ ಹಿನ್ನೆಲೆಯಲ್ಲಿ ಯಾರನ್ನಾದರೂ ಬಂಧಿಸಲು ಕ್ರಮ ಕೈಗೊಳ್ಳಲಾಗಿದೆಯೇ?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು) :

ಅ) ಸರ್ಕಾರದ ಗಮನಕ್ಕೆ ಬಂದಿದೆ.

ಆ) ಇನ್ನೂ ಯಾರನ್ನೂ ಬಂಧಿಸಿರುವುದಿಲ್ಲ. ಈ ಪ್ರಕರಣದ ತನಿಖೆಯನ್ನು (ಸಿ.ಸಿ.ಬಿ) ಸಿಟಿ ಕ್ರೈಂ ಬ್ರಾಂಚ್‌ರವರು ತೆಗೆದುಕೊಂಡಿದ್ದು ತನಿಖೆ ಮುಂದುವರೆದಿದೆ.

ಹುಬ್ಬಳ್ಳಿ ಧಾರವಾಡದಲ್ಲಿ ನಡೆದ ದರೋಡೆ ಹಾಗೂ ಕೊಲೆಗಳ ಸಂಖ್ಯೆ

2150 - ಶ್ರೀ ಅಶೋಕ ಕಾಟ್ವೆ (ಹುಬ್ಬಳ್ಳಿ - ನಗರ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಳೆದ ಒಂದು ವರ್ಷದಿಂದ ಹುಬ್ಬಳ್ಳಿ - ಧಾರವಾಡದಲ್ಲಿ ಎಷ್ಟು ದರೋಡೆ ಹಾಗೂ ಕೊಲೆಗಳು ನಡೆದಿವೆ. ಈ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ. ಪೊಲೀಸ್ ಇಲಾಖೆಯ ನಿಷ್ಕಾಳಜಿಯ ಬಗ್ಗೆ ಸರ್ಕಾರವು ಏನು ಕ್ರಮ ತೆಗೆದುಕೊಂಡಿದೆ?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು) :

	1994	1995
ದರೋಡೆ	7	6
ಕೊಲೆ	29	22

ದರೋಡೆ ಪ್ರಕರಣಗಳ ನಿಯಂತ್ರಣ ಹಾಗೂ ಪತ್ತೆಗೆ ತೆಗೆದುಕೊಂಡ ಕ್ರಮಗಳನ್ನು ಅನುಬಂಧ-ಅ ದಲ್ಲಿ ಲಗತ್ತಿಸಿದೆ.

ಕೊಲೆ ಪ್ರಕರಣಗಳನ್ನು ಪತ್ತೆ ಹಚ್ಚುವಂತೆ ಸಂಬಂಧಪಟ್ಟ ತನಿಖಾಧಿಕಾರಿಗಳಿಗೆ ಸೂಕ್ತ ಸೂಚನೆಗಳನ್ನು ನೀಡಲಾಗಿದೆ, ಅಲ್ಲದೆ ಕಾನೂನಿನಂತೆ ಪ್ರತಿಬಂಧಕ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

ಒಂದು ಪ್ರಕರಣದಲ್ಲಿ ಪೊಲೀಸ್ ಸಬ್ ಇನ್ಸ್‌ಪೆಕ್ಟರ್‌ರವರ ನಿಷ್ಕಾಳಜಿತನವನ್ನು ತೋರಿದ್ದರಿಂದ ವಿದ್ಯಾನಗರ ಪೊಲೀಸ್ ಠಾಣೆಯ ಪೊಲೀಸ್ ಸಬ್ ಇನ್ಸ್‌ಪೆಕ್ಟರ್‌ರವರನ್ನು ಅಮಾನತ್ತಿನಲ್ಲಿಟ್ಟು ಅವರ ವಿರುದ್ಧ ಇಲಾಖಾ ವಿಚಾರಣೆಯನ್ನು ಪ್ರಾರಂಭಿಸಲಾಗಿದೆ.

ಅನುಬಂಧ-ಅ

1. ನಿರ್ಜನ ಹಾಗೂ ಸೂಕ್ಷ್ಮ ಪ್ರದೇಶಗಳಲ್ಲಿ ಸಶಸ್ತ್ರ ಸಿಬ್ಬಂದಿಗಳ ಗಸ್ತನ್ನು ಏರ್ಪಡಿಸಲಾಗುತ್ತಿದೆ.
2. ಅಪರಿಚಿತರು ಹಾಗೂ ಸೂಕ್ಷ್ಮ ಪ್ರದೇಶಗಳಲ್ಲಿ ಸಶಸ್ತ್ರ ಸಿಬ್ಬಂದಿಗಳ ಗಸ್ತನ್ನು ಏರ್ಪಡಿಸಲಾಗುತ್ತಿದೆ.
3. ಅಪರಿಚಿತರು ಹಾಗೂ ಸಂಶಯಾಸ್ಪದರನ್ನು ತಪಾಸಣೆ ಮಾಡಲು ನೌಕಾಬಂದಿಯನ್ನು ನಿರಂತರವಾಗಿ ಏರ್ಪಡಿಸಲಾಗುತ್ತಿದೆ.
4. ಹೆದ್ದಾರಿಗಳಲ್ಲಿ ಸಂಚರಿಸುವ ವಾಹನಗಳಿಗೆ ಸಶಸ್ತ್ರ ಬೆಂಗಾವಲನ್ನು ಒದಗಿಸಲಾಗುತ್ತಿದೆ.
5. ಅಪರಾಧಿಗಳನ್ನು ಪತ್ತೆ ಹಚ್ಚಲು ವಿಶೇಷ ತಂಡವನ್ನು ರಚಿಸಿ ಗಡಿ ಪ್ರದೇಶಗಳಿಗೆ ನಿಯೋಜಿಸಲಾಗುತ್ತಿದೆ.
6. ಗುಪ್ತ ದಳವನ್ನು ಚುರುಕುಗೊಳಿಸಲಾಗಿದೆ, ಹಾಗೂ ಕೆಟ್ಟ ನಡತೆಯುಳ್ಳವರ ಮೇಲೆ ಹೆಚ್ಚಿನ ನಿಗಾ ಇಡಲಾಗಿದೆ. ಪೊಲೀಸ್ ಸಿಬ್ಬಂದಿಗೆ ಈ ಬಗ್ಗೆ ಹೆಚ್ಚಿನ ಮುತುವರ್ಜಿ ವಹಿಸುವಂತೆ ಸೂಚಿಸಲಾಗಿದೆ.
7. ರಾಜ್ಯದ ಗಡಿ ಪ್ರದೇಶದ ಜಿಲ್ಲಾ ಪೊಲೀಸ್ ಅಧಿಕಾರಿಗಳು ನೆರೆಯ ಜಿಲ್ಲೆಯ ಅಧಿಕಾರಿಗಳನ್ನು ಆಗಾಗ ಸಂಪರ್ಕಿಸಿ ದರೋಡೆ ನಿರೋಧಕ ಕ್ರಮಗಳನ್ನು ಕೈಗೊಳ್ಳುವರು.
8 ಗ್ರಾಮ ರಕ್ಷಕ ದಳದವರ ಕ್ರಿಯಾಶೀಲ ಸಹಕಾರವನ್ನು ಪಡೆಯುವುದು.
9. ರಾತ್ರಿ ವೇಳೆ ಪ್ರಯಾಣಿಸುವ ಪ್ರಯಾಣಿಕರಿಗೆ ಅವರ ಪ್ರಾಣ ಮತ್ತು ಆಸ್ತಿಪಾಸ್ತಿಗಳಿಗೆ ರಕ್ಷಣೆ ನೀಡಲು ಹಾಗೂ ರಾತ್ರಿ ವೇಳೆ ಸಂಚರಿಸುವ ಸರಕು ವಾಹನಗಳಿಗೆ ಸೂಕ್ತ ರಕ್ಷಣೆ ನೀಡಲು ರಸ್ತೆ ಮೇಲೆ ಹೆಚ್ಚಿನ ಗಸ್ತನ್ನು ಏರ್ಪಡಿಸಲಾಗಿದೆ.
10. ರಾತ್ರಿ ಕಾವಲು ಮತ್ತು ಗಸ್ತನ್ನು ಅತಿಯಾಗಿ ಬಿಗಿಗೊಳಿಸಿ ಜಾಗರೂಕತೆಯಿಂದ ಗಸ್ತು ಮಾಡಿಸಲಾಗುತ್ತಿದೆ.
11. ಜಿಲ್ಲೆಯಲ್ಲಿ ಕ್ರೈಂ ಸ್ಕ್ವಾಡ್ ಅನ್ನು ರಚಿಸಿ, ಪ್ರಕರಣಗಳನ್ನು ಪತ್ತೆ ಹಚ್ಚುವ ಕಾರ್ಯ ಚುರುಕಾಗಿ ನಡೆದಿದೆ.

12. ಬಸ್ ನಿಲ್ದಾಣಗಳಲ್ಲಿ, ರೈಲ್ವೇ ಸ್ಟೇಷನ್, ಮುಖ್ಯವಾದ ರಾಷ್ಟ್ರೀಯ ಹೆದ್ದಾರಿಗಳು ಕೂಡುವ ಸ್ಥಳಗಳಲ್ಲಿ ಮತ್ತು ವಿಶೇಷವಾಗಿ ದಾಬಾ ಹೋಟೆಲುಗಳು ಇರುವ ಸ್ಥಳಗಳಲ್ಲಿ ಸಂಶಯಾಸ್ಪದವಾಗಿ ಸಂಚರಿಸುವ ವ್ಯಕ್ತಿಗಳ ತಪಾಸಣೆ ಮಾಡುವುದು.

13. ಕಳವು ಮಾಲುಗಳನ್ನು ತೆಗೆದುಕೊಳ್ಳುವ ಪರಿಚಿತ ವ್ಯಕ್ತಿಗಳ ತಪಾಸಣೆ ಮಾಡುವುದು.

14. ಸೈರನ್ ಅಥವಾ ಅಲಾರಾಮ್ ಅನ್ನು ಸಾಧ್ಯವಿರುವ ಕಡೆ ಅಳವಡಿಸುವುದು.

15. ನಗರ ಹಾಗೂ ಟೌನ್ ಪ್ರದೇಶಗಳಲ್ಲಿ ತಡವಾಗಿ ರಾತ್ರಿ ಹೊತ್ತಿನಲ್ಲಿ ಚಿತ್ರ ಮಂದಿರಗಳಿಂದ ಬರುವ ಸಂಶಯಾಸ್ಪದವಾದ ವ್ಯಕ್ತಿಗಳ ಬಗ್ಗೆ ನಿಗಾ ಇಡುವುದು.

16. ನಗರ ಮತ್ತು ಟೌನುಗಳಲ್ಲಿ ರಾತ್ರಿ ಮತ್ತು ಹಗಲು ಹೊತ್ತಿನ ಪ್ರತಿಕೂಲದ ಸಮಯಗಳಲ್ಲಿ ತಂಗುವ ಜನರನ್ನು ತಪಾಸಣೆ ಮಾಡುವುದು.

ಹುಬ್ಬಳ್ಳಿಯಲ್ಲಿ ಹೈಕೋರ್ಟ್ ಪೀಠ ಸ್ಥಾಪನೆ ಬಗ್ಗೆ

1898 - ಶ್ರೀ ಅಶೋಕ್ ಕಾಟವೆ (ಹುಬ್ಬಳ್ಳಿ - ನಗರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೇ?

ಅ) ಹುಬ್ಬಳ್ಳಿಯಲ್ಲಿ ಹೈಕೋರ್ಟ್ ಪೀಠ ಸ್ಥಾಪನೆ ಬಗ್ಗೆ ಸರ್ಕಾರದ ಸ್ಪಷ್ಟ ನಿಲುವೇನು?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯ ಮಂತ್ರಿಗಳು) :

ಅ) ಸರ್ಕಾರವು ಹುಬ್ಬಳ್ಳಿ - ಧಾರವಾಡ ಅವಳಿ ನಗರದಲ್ಲಿ ಉಚ್ಚ ನ್ಯಾಯಾಲಯದ ಒಂದು ಖಾಯಂ ಪೀಠವನ್ನು ಸ್ಥಾಪಿಸುವ ಪ್ರಸ್ತಾವನೆಯ ಪರವಾಗಿದೆ.

ಹಿರೇಕೆರೂರು ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ಇಲಾಖೆಯಲ್ಲಿ ಆಗಿರುವ ಕಾಮಗಾರಿ

2554 - ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸಣ್ಣ ನೀರಾವರಿ ಇಲಾಖೆಯಿಂದ ಹಿರೇಕೆರೂರು ತಾಲ್ಲೂಕಿನಲ್ಲಿ 1992-93, 93-94, 94-95ನೇ ಸಾಲಿನಲ್ಲಿ ಯಾವ ಯಾವ ಕೆಲಸಗಳನ್ನು ತೆಗೆದುಕೊಳ್ಳಲಾಗಿದೆ. ಎಷ್ಟು ಹಣ ಖರ್ಚು ಮಾಡಲಾಗಿದೆ; (ಎಲ್ಲಾ ಲೆಕ್ಕ ಶೀರ್ಷಿಕೆಯಡಿಯಲ್ಲಿ, ಯೋಜನೆ ಯೋಜನೇತರ ವಿವರವನ್ನೊದಗಿಸುವದು);

ಆ) ನೆರೆ ಹಾವಳಿಯಿಂದ ಪೀಡಿತವಾಗಿದ್ದ ಈ ಇಲಾಖೆಯಿಂದ ಯಾವ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ; ಎಷ್ಟು ಖರ್ಚು ಮಾಡಲಾಗಿದೆ;

ಇ) 1995-96ನೇ ಸಾಲಿನಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ಯೋಜನೆ ಹಾಗೂ ಯೋಜನೇತರ ಭಾಗದಲ್ಲಿ ಲೆಕ್ಕ ಶೀರ್ಷಿಕೆವಾರು ನಿಗಧಿಪಡಿಸಿದ ಆರ್ಥಿಕ ಗುರಿ ಎಷ್ಟು

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಸಣ್ಣ ನೀರಾವರಿ ರಾಜ್ಯ ಸಚಿವೆಯರು):

ಅ) ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ.

ಆ) ವಿವರಗಳನ್ನು ಅನುಬಂಧ-2ರಲ್ಲಿ ನೀಡಲಾಗಿದೆ ಹಿರೇಕೆರೂರು ತಾಲ್ಲೂಕಿನಲ್ಲಿ ನಿಗಧಿಪಡಿಸಿದ ಆರ್ಥಿಕ ಗುರಿ ಈ ರೀತಿ ಇದೆ.

ಇ) 4702 ಸಣ್ಣ ನೀರಾವರಿ ಯೋಜನೆ (ಲಕ್ಷ ರೂ.ಗಳಲ್ಲಿ)

1)	ಕೆರೆ ಹೂಳೆತ್ತುವುದು	6.70
2)	ಕೆರೆ ಕಲ್ಯಾಣ	0.45
3)	ಬ್ಯಾರೇಜ್ ನಿರ್ಮಾಣ	4.30